b) is it a fact that Tahsildars who are in the cadre of Class-II Officers are Chairman in many Committees and the Officers like Asst. Exe. Engineers, P.W.D. who are in the cadre of Class-I are members in such Committee. Is it good for smooth running of the administration ?

c) when the Taluk Level Officers of other Dept. have been elevated to the cadre of Class-I, why the posts of Tahsildars who is the head of the Taluk Administration at Taluk level have not been upgraded ?

SRI K.H. PATIL (Revenue Minister).—

a) Yes. The matter is being examined.

b) Yes.

c) Does not arise in viaw of the answer to 'A' above.

ಶ್ರೀ ಟಿ.ಬಿ. ಜಯಚಂದ್ರ.— ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಕಳೆದ ೭ ವರ್ಷಗಳಿಂದ ಸರ್ಕಾರದ ಪರಿಶೀಲನೆಯಲ್ಲಿ ಇದು ಇದೆ ಎಂದು ಒಪ್ಪಿಕೊಂಡಿದ್ದಾರೆ. ಈಗಾಗಲೇ ಏಳು ವರ್ಷವಾಗಿದೆ. ನೀವು ತೀರ್ಮಾನ ತೆಗೆದುಕೊಳ್ಳಲು ಇನ್ನೂ ಎಷ್ಟು ವರ್ಷ ಬೇಕು ?

ಶ್ರೀ ಕೆ. ಹೆಚ್. ಪಾಟೀಲ್.— ಸರ್ಕಾರ ಇದನ್ನು ವಿಚಾರ ಮಾಡುತ್ತದೆ ಎಂದು ಹೇಳಿದೆಯೇ ಹೊರತು ಈ ಪೋಸ್ಟ್ ಅನ್ನು ಅಪ್‌ಗ್ರೇಡ್ ಮಾಡುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ.

ಶ್ರೀ ಟಿ. ಬಿ. ಜಯಚಂದ್ರ.— ಬೇರೆ ಇಲಾಖೆಗಳಲ್ಲಿ ಇದೇ ವರ್ಗದವರಿಗೆ ಅಪ್‌ಗ್ರೇಡ್ ಮಾಡಲಾಗಿದೆ, ಇವರಂ ತಾಲ್ಲೂಕು ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡುವಾಗ ಬೇರೆ ಇಲಾಖೆ ಅಧಿಕಾರಿಗಳು ಇವರೊಂದಿಗೆ ಕೋ-ಆಪರೇಟ್ ಮಾಡುವುದಿಲ್ಲ; ಹಿಂದೆ ಮಾನ್ಯ ಸಚಿವರೂ ಇದೇ ಪಾದವನ್ನು ಶಾಸಕರಾಗಿದ್ದಾಗ ಸಹ ಮಾಡಿದ್ದರು. ಇದರ ಜೊತೆಗೆ ಹಿಂದೆ ೨೦ ಅಂಶಗಳ ಕಾರ್ಯಕ್ರಮದ ಮೀಟಿಂಗ್ ನಡೆದಾಗ ಎಇಇಗಳು, ಡಾಕ್ಟರ್‌ಗಳು ಮೀಟಿಂಗಿಗೇ ಬರುತ್ತಿರಲಿಲ್ಲ. ಆ ವಿಚಾರ ಬೇರೆ. ಇದು ತಮಗೆ ಗೊತ್ತಿದ್ದರೂ ಸಹ ಇನ್ನೂ ಇದು ಪರಿಶೀಲನೆಯಲ್ಲಿದೆ ಎಂದು ಏತಕ್ಕೆ ಹೇಳುತ್ತೀರಿ? ಇದರಲ್ಲಿ ಮತ್ತೆ ಉಪ ಪ್ರಶ್ನೆ ಕೇಳುವ ಅಗತ್ಯವೇ ಇಲ್ಲ. ಸರ್ಕಾರ ತನ್ನ ನಿರ್ಧಾರವನ್ನು ಪ್ರಕಟಿಸಲೇಬೇಕು. ಅದು ಹೊರ ಬರಲೇ ಬೇಕು. ತಮ್ಮ ತೀರ್ಮಾನವನ್ನು ತಿಳಿಸಲೇಬೇಕು ?

ಶ್ರೀ ಕೆ. ಹೆಚ್. ಪಾಟೀಲ್.— ಒಬ್ಬ ಡೆಪ್ಯುಟಿ ಕಮಿಷನರ್ ರೀಸರ್ಚ್ ಕಮಿಟಿ ಮಾಡಿದಾಗ ರೀಸರ್ಚ್ ಮಾಡುವವರ ಪಗಾರ ೧೦ ಸಾವಿರ ಇರುತ್ತದೆ. ಆದರೆ ಡಿ ಸಿ. ಅವರ ಸಂಬಳ ಮೂರು ಸಾವಿರ ಇರುತ್ತದೆ. ಆದ್ದರಿಂದ ಪಗಾರದ ಪ್ರಮಾಣದ ಮೇಲೆ ಗೌರವ ಅಳೆಯುವುದಕ್ಕಾಗುವುದಿಲ್ಲ. ಇವೊತ್ತು ತಹಸೀಲ್ದಾರ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡಿದರೆ ಇತರ ಅನೇಕ ಹುದ್ದೆಗಳನ್ನೂ ಅಪ್‌ಗ್ರೇಡ್ ಮಾಡಲು ಚಿಂತನೆ ಮಾಡಬೇಕಾಗುತ್ತದೆ. ಸರ್ಕಾರದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಅದನ್ನು ಚಿಂತನೆ ಮಾಡಲು ಸಧ್ಯಕ್ಕೆ ಸಾಧ್ಯವಿಲ್ಲ.

ಹಂಬ್ಬಳ್ಳಿನಗರದಲ್ಲಿ ಕೈ ಬಾಂಬು ಸಿಕ್ಕಿರುವ ಬಗ್ಗೆ

೧೩೨೯. ಶ್ರೀ ಪಿ. ಸಿ. ಸಿದ ನಗೌಡ್ರ (ಕಲಘಟಗಿ)— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ನಗರದಲ್ಲಿ ಕೈ ಬಾಂಬು ಸಿಕ್ಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಕೈಬಾಂಬುಗಳು ಯಾವ ಸ್ಥಳದಲ್ಲಿಸಿಕ್ಕಿರುವುದು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ದಿನಾಂಕ ೧೧-೧೨-೧೯೮೮ರಲ್ಲಿ ಎರಡು ಕೈ ಬಾಂಬುಗಳು ಹುಬ್ಬಳ್ಳಿ ಬಿಂಡಿಗೇರಿ ಪೋಲಿಸ್ ಠಾಣೆ ವ್ಯಾಪ್ತಿಯ ಸೆಟಲ್‌ಮೆಂಟ್ ಏರಿಯಾದಲ್ಲೂ, ದಿನಾಂಕ ೧-೫-೧೯೮೮ ರಂದು ಎರಡು ಕೈಬಾಂಬು ಕಾಳಮ್ಮನ ಅಗಸಿ, ನೇತಾಜಿ ಪ್ರಿಂಟಿಂಗ್ ಪ್ರೆಸ್ ಬಳಿ, ದಿನಾಂಕ ೨೫-೫-೧೯೮೮ ರಂದು ಒಂದು ಕೈ ಬಾಂಬು ಹುಬ್ಬಳ್ಳಿಯ ಕಾಳಮ್ಮನ ಅಗಸಿ ಎಂಬ ಸ್ಥಳದಲ್ಲಿ, ದಿನಾಂಕ ೨-೬-೧೯೮೦ ರಂದು ನಾಲ್ಕು ಕೈಬಾಂಬುಗಳು ಹುಬ್ಬಳ್ಳಿಯ ಮೇದರ ಒಣಿಯಲ್ಲಿರುವ ಸಾರ್ವಜನಿಕ ಶೌಚಾಲಯದ ಬಳಿ ಸಿಕ್ಕಿರುತ್ತದೆ.

ಶ್ರೀ ಪಿ. ಸಿ. ಸಿದ್ದನಗೌಡರ್.— ಅಧ್ಯಕ್ಷರೇ, ೮೮ರಿಂದ ಇಲ್ಲಿಯವರೆಗೆ ಹುಬ್ಬಳ್ಳಿಯಲ್ಲಿ ಸುಮಾರು ೧೧ ಕೈಬಾಂಬ್ ಸಿಕ್ಕಿವೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇದಕ್ಕಿಂತ ಹೆಚ್ಚಿಗೆ ಸಿಕ್ಕಿವೆ ಎಂಬುದು ನನ್ನ ವಾದ. ಈ ಕೈಬಾಂಬ್‌ಗಳಿಂದ ಅನೇಕ ಜನಕ್ಕೆ ಕಾಲುಗಳನ್ನು ಕಳೆದುಕೊಂಡಿದ್ದಾರೆ ಗುಜರಾತ್ ಭವನದಲ್ಲಿ ಒಂದು ಕಾರ್ಯಕ್ರಮ ಇತ್ತು. ಅಲ್ಲಿ ಕೈಬಾಂಬ್ ಇಡಲಾಗಿದೆ ಎಂದು ಸುದ್ದಿ ಹಬ್ಬಿದಾಗ ಅಲ್ಲಿದ್ದ ಇಡೀ ಜನವೆಲ್ಲ ಭವನ ಬಿಟ್ಟು ಓಡಿಹೋದರು ಇಂಥ ಪರಿಸ್ಥಿತಿ ಅಲ್ಲಿದೆ. ಈ ಬಗ್ಗೆ ಮೂರು ವರ್ಷದಿಂದ ಏನು ಕ್ರಮ ಕೈಗೊಂಡು, ಯಾರ್ಯಾರನ್ನು ಅರೆಸ್ಟ್ ಮಾಡಿದ್ದಾರೆ ಮುಂದಕ್ಕೆ ಹೀಗಾಗದಂತೆ ಏನು ಕ್ರಮ ಕೈಗೊಳಿಸಿದ್ದಾರೆ ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಲಿ (ಕಾನೂನು ಸಚಿವರು). — (ಮುಖ್ಯಮಂತ್ರಿಗಳ ಪರವಾಗಿ) ೮೮-೮೯ ರಿಂದ ೮೯-೯೦ರ ಅವಧಿಯಲ್ಲಿ ಸಿಕ್ಕಿದ ಕೈಬಾಂಬ್‌ಗಳ ಬಗ್ಗೆ ಇಂಡಿಯನ್ ಎಕ್ಸ್‌ಪ್ಲೋಸಿವ್ಸ್ ಕಾಯಿದೆ ಪ್ರಕಾರ ಸೆಕ್ಷನ್ ೫೩(೨)೫೩(೪)ರ ಭಾರತದ ದಂಡ ಸಂಹಿತೆ ಅಡಿಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಲಾಗಿದೆ, ಅವುಗಳ ಪೈಕಿ ಬಿಂಡಿಗೇರಿ ಪೋಲಿಸ್ ಠಾಣೆ ಅಪರಾಧ ಸಂಖ್ಯೆ ೧೩೪:೮೮ರ ಪ್ರಕರಣದಲ್ಲಿ ಐದು ಜನರನ್ನು ದಸ್ತುಗಿರಿ ಮಾಡಿದ್ದು ಒಬ್ಬ ಕಣ್ಮರೆಯಾಗಿದ್ದಾನೆ. ಇವರೆಲ್ಲರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಕೋರ್ಟಿಗೆ ಸಲ್ಲಿಸಲಾಗಿದೆ. ಇದೆಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದೆ. ಆದ್ದರಿಂದ ಎಲ್ಲೆಲ್ಲಿ ಈ ಪ್ರಕರಣಗಳು ನಡೆದಿದೆ, ಆ ಬಗ್ಗೆ ಕೇಸ್‌ಗಳನ್ನು ದಾಖಲು ಮಾಡಲಾಗಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್.— ಇನ್ನು ಮುಂದೆ ಹೀಗಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಆಗಬಹುದು.

ಬೆಂಗಳೂರು ಮಹಾನಗರ ಪಾಲಿಕೆಯವರಿಂದ ದೂರವಾಣಿ ಬೂತ್‌ಗಳನ್ನು ತೆಗೆದುಹಾಕಿರುವುದು

೧೨೧೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) ಶ್ರೀ ಏಕಾಂತಯ್ಯ (ಚಿತ್ರದುರ್ಗ) ಶ್ರೀ ಎಂ ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಅಂಗವಿಕಲರು ನಡೆಸುತ್ತಿದ್ದ ದೂರವಾಣಿ ಬೂತ್‌ಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯವರು ತೆಗೆದು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇದರಿಂದಾಗಿ ಅಂಗವಿಕಲರ ಜೀವನೋಪಾಯಕ್ಕೆ ತೊಂದರೆಯಾಗಿರುವುದು ಸಹಾ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮಾನ್ಯ ಮುಂತ್ರಿಗಳು). —

ಅ) ಭೂತುಗಳನ್ನು ತೆಗೆದು ಹಾಕಲಾಗಿಲ್ಲ. ಬದಲು ಖಾಲಿ ಪ್ರದೇಶಗಳನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ಸ್ಥಳಾಂತರಿಸಲಾಗಿದೆ.

ಆ) ಬದಲಿ ವ್ಯವಸ್ಥೆಯನ್ನು ಒಂದು ದಿನದಲ್ಲಿಯೇ ಮಾಡಲಾಯಿತು. ಇದರಿಂದ ಅಂಗವಿಕಲರಿಗೆ ದೈನಂದಿನ ಜೀವನಕ್ಕೆ ಯಾವ ಅಡಚಣೆಯೂ ಆಗಲಿಲ್ಲ.

ಇ) ಉದ್ಭವಿಸುವುದಿಲ್ಲ.